<u>ಕರ್ನಾಟಕ ಲೋಕಾಯುಕ್ತ</u>

ನಂ. ಕಂಪ್ಲೇಂಟ್/ಉಪಲೋಕ್/ಎಂವೈಎಸ್/1464/2021 ಬಹುಮಹಡಿಗಳ ಕಟ್ಟಡ,
ಪಿ.ಓ. ಎಆರ್‌ಇ-06 (ಮಂಡನಾಧಿಕಾರಿಗಳ ಶಾಖೆ). ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 10/01/2022.

**<u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ</u>**

ವಿಷಯ: **ಶ್ರೀ. ಬಿ.ಕೆ. ಸಂಪತ್‌ಕುಮಾರ್ ಬಿನ್ ಕುಂದೂರಯ್ಯ, ಸಹಾಯಕ ತೋಟಗಾರಿಕೆ ಅಧಿಕಾರಿ, ಉಪನಿರ್ದೇಶಕರ ಕಛೇರಿ (ಜಿಲ್ಲಾ ಪಂಚಾಯತ್) ತೋಟಗಾರಿಕೆ ಇಲಾಖೆ, ಮಂಡ್ಯ, ಹಾಲಿ: ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ತೋಟಗಾರಿಕೆ ಇಲಾಖೆ, ಮದ್ದೂರು, ಮಂಡ್ಯ ಜಿಲ್ಲೆರವರು** ದುರ್ನಡತೆ / ದುರ್ವತನೆ ತೋರಿದ ಬಗ್ಗೆ.

*****

1. ಮಂಡ್ಯ ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆಯ ಪೋಲಿಸ್ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ **ಶ್ರೀ. ಬಿ.ಕೆ. ಸಂಪತ್‌ಕುಮಾರ್ ಬಿನ್ ಕುಂದೂರಯ್ಯ, ಸಹಾಯಕ ತೋಟಗಾರಿಕೆ ಅಧಿಕಾರಿ, ಉಪನಿರ್ದೇಶಕರ ಕಛೇರಿ (ಜಿಲ್ಲಾ ಪಂಚಾಯತ್) ತೋಟಗಾರಿಕೆ ಇಲಾಖೆ, ಮಂಡ್ಯ, ಹಾಲಿ: ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ತೋಟಗಾರಿಕೆ ಇಲಾಖೆ, ಮದ್ದೂರು, ಮಂಡ್ಯ ಜಿಲ್ಲೆ** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). ದೂರುದಾರರಾದ **ಶ್ರೀ. ಸುಂದರಯ್ಯ ಬಿನ್ ಬೋರಯ್ಯ, ಜೀಗುಂಡಿ ಪಟ್ಟಣ ಗ್ರಾಮ, ಹೆಚ್.ಮಲ್ಲಿಗೆರೆ ಅಂಚೆ, ಮಂಡ್ಯ ತಾಲೂಕು, ಮಂಡ್ಯ ಜಿಲ್ಲೆ** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ). ಇವರು ಎದುರುದಾರರನ್ನು ಅವರ ಕೆಲಸದ ನಿಮಿತ್ತ ಭೇಟಿ ಮಾಡಿದಾಗ, ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ:-**

i) ದೂರುದಾರರಾದ ಶ್ರೀ. ಸುಂದರಯ್ಯ ಬಿನ್ ಬೋರಯ್ಯ, ಜೀಗುಂಡಿ ಪಟ್ಟಣ ಗ್ರಾಮದ ವಾಸಿಯಾದ ಇವರಿಗೆ ಮಂಡ್ಯ ತಾಲ್ಲೂಕು ಹೆಚ್.ಕೋಡಿಹಳ್ಳಿ ಎಲ್ಲೆಯಲ್ಲಿರುವ

ಸರ್ವೆ ನಂ.13/10 ಪಿ2 ರಲ್ಲಿ 1 ಎಕರೆ 5 ಗುಂಟೆ ಜಮೀನು ಇದ್ದು, ಅದರಲ್ಲಿ 3,000 ಚದರ ಮೀ. (30 ಗುಂಟೆ) ಅಳತೆಯ ಹಸಿರುಮನೆಯನ್ನು ನಿರ್ಮಾಣ ಮಾಡಿದ್ದು, ಈ ಬಗ್ಗೆ ಕೃಷಿಭಾಗ್ಯ ಯೋಜನೆಯಡಿ ಹಸಿರುಮನೆ ನಿರ್ಮಾಣಕ್ಕೆಂದು ಸರ್ಕಾರದಿಂದ ದೊರೆಯಬಹುದಾದ ಸಹಾಯಧನಕ್ಕೆ ಕೃಷಿ ಇಲಾಖೆಗೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ಉಪನಿರ್ದೇಶಕರ ಕಛೇರಿ ಮಂಡ್ಯಕ್ಕೆ ಕಳುಹಿಸಿರುತ್ತಾರೆ. ದಿ: 15/02/2016 ರಂದು ಉಪನಿರ್ದೇಶಕರು ಕಾರ್ಯಾದೇಶವನ್ನು ನೀಡಿದ್ದು, ನಂತರ ಹಣ ಮಂಜೂರಾತಿಯ ಬಗ್ಗೆ ಬಿಲ್ ಮತ್ತು ಸಂಬಂಧಿಸಿದ ದಾಖಲೆಗಳನ್ನು ದೂರುದಾರರು ಸಲ್ಲಿಸಿರುತ್ತಾರೆ. ಬಿಲ್ ಮಂಜೂರಾತಿಯ ಬಗ್ಗೆ ದೂರುದಾರರು ಎದುರುದಾರರನ್ನು ಭೇಟಿಮಾಡಿ ವಿಚಾರ ಮಾಡಿದಾಗ ಎದುರುದಾರರು ಬಿಲ್ ಮೊತ್ತದ ಶೇಕಡ 10 ರಷ್ಟು ಹಣವನ್ನು ಲಂಚದ ರೂಪದಲ್ಲಿ ನೀಡುವಂತೆ ಬೇಡಿಕೆ ಇಟ್ಟಿರುತ್ತಾರೆ. ಸದರಿ ಮೊತ್ತವನ್ನು ಎದುರುದಾರರು ಮತ್ತು ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಇಬ್ಬರೂ ಹಂಚಿಕೊಳ್ಳುವುದಾಗಿ ತಿಳಿಸಿರುತ್ತಾರೆ. ದಿ: 20/12/2016 ರಂದು ದೂರುದಾರರು ಎದುರುದಾರರನ್ನು ಭೇಟಿಯಾದಾಗ ಈ ದಿನವೇ ಹಿಂದೆ ಹೇಳಿದಂತೆ ಹಣವನ್ನು ತಂದು ಜಗದೀಶ್‌ರವರಿಗೆ ಕೊಡಬೇಕು ಇಲ್ಲದಿದ್ದಲ್ಲಿ ನಾಳೆ ಕೊಟ್ಟರೆ, ದೂರುದಾರರ ಬಿಲ್ಲಿನಲ್ಲಿ 2 ಲಕ್ಷದಷ್ಟು ಹಣ ಕಡಿಮೆಯಾಗುತ್ತದೆ ಎಂದು ಹೇಳಿ ಹಿಂದೆ ಹೇಳಿದ ಶೇಕಡ 10 ರಷ್ಟು ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿದ್ದು ಇರುತ್ತದೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ್ದರಿಂದ ದಿ: 20/12/2016 ರಂದು ಮಂಡ್ಯ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಗೆ ಹಾಜರಾಗಿ ಪೊಲೀಸ್ ಉಪಾಧೀಕ್ಷಕರಿಗೆ ಲಿಖಿತ ದೂರನ್ನು ನೀಡಿದ್ದು, ಸದರಿ ಠಾಣೆಯ ಠಾಣಾಧಿಕಾರಿಗಳು ದೂರನ್ನು ಪರಿಶೀಲಿಸಿ, ಠಾಣೆಯ ಗುನ್ನೆ ನಂ.05/2016 ರಲ್ಲಿ ಕಲಂ 7, 13(1)(ಡಿ) ಸಹಿತ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ, 1988 ರಡಿಯಲ್ಲಿ, ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿನಾಂಕ 10/12/2016ರಂದು ಜಪ್ತಿ ಪೂರ್ವದ ಪಂಚನಾಮೆ ಸಮಯದಲ್ಲಿ ತನಿಖಾಧಿಕಾರಿಗಳು ಇಬ್ಬರು ಪಂಚರನ್ನು ಠಾಣೆಗೆ ಕರೆಯಿಸಿ, ದೂರುದಾರರನ್ನು ಪರಿಚಯಿಸಿ, ಪಂಚರಿಗೆ ದೂರಿನ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ ನಂತರ ಪಂಚಸಾಕ್ಷಿದಾರರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿರುತ್ತಾರೆ. ದೂರುದಾರರು ಎದುರುದಾರರ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದ ಮೊಬೈಲ್‌ನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯವರು ಮೊಬೈಲ್‌ನಲ್ಲಿರುವ

ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ, ಆ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ನಂತರ ಲ್ಯಾಪ್‌ಟಾಪ್ ಮೂಲಕ ಎರಡು ಸಿ.ಡಿ.ಗಳಿಗೆ ವರ್ಗಾಯಿಸಿರುತ್ತಾರೆ. ತನಿಖಾಧಿಕಾರಿಯವರು ಆ ಸಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯ ಮುಂದೆ ಎದುರುದಾರರಿಗೆ ನೀಡಬೇಕಾಗಿರುವ ಲಂಚದ ಹಣವಾಗಿ 2,000/- ರೂ. ಮುಖಬೆಲೆಯ 37 ನೋಟುಗಳನ್ನು (ಒಟ್ಟು 74,000/- ರೂ. ಹಣವನ್ನು) ದೂರುದಾರರು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆಯಂತೆ ಪಂಚಸಾಕ್ಷಿ-1ರವರಿಗೆ ನೋಟುಗಳ ವಿವರಗಳನ್ನು ಪಂಚಸಾಕ್ಷಿ-2 ರವರಿಗೆ ಹೇಳಿದಂತೆ ಪಂಚಸಾಕ್ಷಿ-2ರವರು ಹಾಳೆಯಲ್ಲಿ ನಮೂದಿಸಿಕೊಂಡ ನಂತರ, ತನಿಖಾಧಿಕಾರಿಯವರ ಸೂಚನೆಯಂತೆ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆಯಂತೆ ಪಂಚಸಾಕ್ಷಿ-1 ರವರು ಪುಡಿಲೇಪಿತ ನೋಟುಗಳನ್ನು ದೂರುದಾರರ ಶರ್ಟಿನ ಎಡಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಒಂದು ಧ್ವನಿಮುದ್ರಕವನ್ನು ನೀಡಿ, ಎದುರುದಾರರ ಬಳಿ ಹೋಗುವಾಗ ಅದನ್ನು ಚಾಲನಾ ಸ್ಥಿತಿಯಲ್ಲಿ ಇಟ್ಟುಕೊಳ್ಳುವಂತೆ ತಿಳಿಸಿರುತ್ತಾರೆ. ಅಲ್ಲದೆ, ದೂರುದಾರರಿಗೆ ಎದುರುದಾರರ ಬಳಿ ಹೋಗಿ ನಿಮ್ಮ ಕೆಲಸದ ಬಗ್ಗೆ ವಿಚಾರಿಸಿ, ಆಗ ಎದುರುದಾರರು ಲಂಚದ ಹಣಕ್ಕೆ ಒತ್ತಾಯಿಸಿದರೆ, ದೂರುದಾರರಿಗೆ ನಿಮ್ಮಲ್ಲಿರುವ ಪುಡಿಲೇಪಿತ ನೋಟುಗಳನ್ನು ಎದುರುದಾರರಿಗೆ ಕೊಡುವಂತೆ ತಿಳಿಸಿದ್ದಲ್ಲದೆ, ಅವರು ಪಡೆದುಕೊಂಡ ನಂತರ ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆಂಬುದನ್ನು ಗಮನಿಸಿ, ಹೊರಗಡೆ ಬಂದು ದೂರುದಾರರಿಗೆ ಕರ್ಚಿಫ್‌ನಿಂದ ಮುಖ ಒರೆಸಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ಮತ್ತು ನೆರಳುಸಾಕ್ಷಿಗೆ ದೂರುದಾರರ ಜೊತೆ ಹೋಗಿ ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿರುತ್ತಾರೆ. ಎಲ್ಲಾ ಔಚಿತ್ಯಪೂರ್ವ ಹಣವಹಿಸುವಿಕೆಯ ಪಂಚನಾಮೆಯನ್ನು ದೂರುದಾರರು, ನೆರಳು ಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

iii) ದಿನಾಂಕ 20/12/2016ರಂದು ದೂರುದಾರರು, ನೆರಳು ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಯವರು ಎದುರುದಾರರ ಕಛೇರಿ ಬಳಿ ಬಂದಿರುತ್ತಾರೆ. ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಮತ್ತೊಮ್ಮೆ ಸೂಚನೆಗಳನ್ನು ನೆನಪಿಸಿ, ಎದುರುದಾರರ ಬಳಿ ಕಳುಹಿಸಿರುತ್ತಾರೆ. ದೂರುದಾರರು ನೆರಳುಸಾಕ್ಷಿಯೊಂದಿಗೆ ಎದುರುದಾರರ ಕಛೇರಿಯ ಕೊಠಡಿಗೆ ಹೋಗಿ ಅವರನ್ನು ಭೇಟಿಮಾಡಿದಾಗ, ಅಲ್ಲಿ ಶ್ರೀ. ಜಗದೀಶ್‌ರವರಿದ್ದು, ಎದುರುದಾರರು ಶ್ರೀ. ಜಗದೀಶ್‌ರವರಿಗೆ ಬೇಡಿಕೆ ಇಟ್ಟ ಲಂಚದ ಹಣವನ್ನು ಕೊಟ್ಟುಹೋಗಿ, ನಿಮ್ಮ

ಕೆಲಸವನ್ನು ಮಾಡಿಕೊಡುತ್ತೇನೆ ಎಂದು ದೂರುದಾರರಿಗೆ ತಿಳಿಸಿದ್ದು, ಆಗ ದೂರುದಾರರು ಅವರ ಬಳಿಯಿದ್ದ 74,000/- ರೂ. ಪುಡಿಲೇಪಿತ ಹಣವನ್ನು ಜಗದೀಶ್‌ರವರಿಗೆ ನೀಡಿದ್ದು, ಅವರು ಬಲಗೈನಿಂದ ಪಡೆದುಕೊಂಡು ಎರಡೂ ಕೈಗಳಿಂದ ಎಣಿಸಿ, ಅವರು ಧರಿಸಿದ್ದ ಪ್ಯಾಂಟಿನ ಎಡಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ಕರ್ಚೀಫ್‌ನಿಂದ ಮುಖ ಒರೆಸಿಕೊಳ್ಳುವ ಮೂಲಕ ಸೂಚನೆ ನೀಡಿರುತ್ತಾರೆ.

iv) ಆಗ ತನಿಖಾಧಿಕಾರಿಯವರು, ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ಧಾವಿಸಿ, ದೂರುದಾರರು ಎದುರುದಾರರನ್ನು ತೋರಿಸಿ ಅವರ ಸೂಚನೆ ಮೇರೆಗೆ ಶ್ರೀ. ಜಗದೀಶ್ ಎಂಬುವವರಿಗೆ ಪುಡಿಲೇಪಿತ ನೋಟುಗಳನ್ನು ನೀಡಿದ್ದಾಗಿ ತಿಳಿಸಿ, ಅಲ್ಲಿಯೇ ಇದ್ದ ಶ್ರೀ. ಜಗದೀಶ್‌ರವರನ್ನು ದೂರುದಾರರು ತನಿಖಾಧಿಕಾರಿಯವರಿಗೆ ತೋರಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ಜಗದೀಶ್‌ರವರನ್ನು ಮತ್ತು ಎದುರುದಾರರನ್ನು ವಶಕ್ಕೆ ಪಡೆದು, ತನಿಖೆಗೆ ಸಹಕರಿಸುವಂತೆ ತಿಳಿಸಿದಾಗ ಒಪ್ಪಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ ಸಿಬ್ಬಂದಿಯು ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಎರಡು ಬಟ್ಟಲುಗಳಲ್ಲಿ ಪಡೆದುಕೊಂಡು, ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಜಗದೀಶ್‌ನ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆದಾಗ ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಜಗದೀಶ್‌ನ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆದಾಗ ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ದ್ರಾವಣಗಳನ್ನು ಪ್ರತ್ಯೇಕವಾಗಿ ಬಾಟಲಿಯಲ್ಲಿ ಸಂಗ್ರಹಿಸಿ ವಶಕ್ಕೆ ಪಡೆದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಂದ ಪಡೆದ ಹಣದ ಬಗ್ಗೆ ವಿಚಾರಿಸಿದಾಗ ಜಗದೀಶನು ಪುಡಿಲೇಪಿತ ನೋಟುಗಳು ತನ್ನ ಪ್ಯಾಂಟಿನ ಎಡಭಾಗದ ಜೇಬಿನಿಂದ ತೆಗೆದು ಹಾಜರುಪಡಿಸಿದ್ದು, ತನಿಖಾಧಿಕಾರಿಯ ಸೂಚನೆ ಮೇರೆಗೆ ಪಂಚಸಾಕ್ಷಿ-2ರವರು ಅವರ ಬಳಿಯಿದ್ದ ನೋಟುಗಳ ವಿವರಗಳುಳ್ಳ ಹಾಳೆಗೆ ತಾಳೆ ಮಾಡಿ ನೋಡಿದಾಗ ನೋಟುಗಳ ವಿವರಗಳು ತಾಳೆಯಾದ್ದರಿಂದ, ಆ ನೋಟುಗಳನ್ನು ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಯವರು ಶ್ರೀ. ಜಗದೀಶನಿಗೆ ಬೇರೊಂದು ಪ್ಯಾಂಟಿನ ವ್ಯವಸ್ಥೆಮಾಡಿ, ಅವರು ಧರಿಸಿದ್ದ ಪ್ಯಾಂಟಿನ ಎಡಭಾಗದ ಜೇಬಿನ ಒಳಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಯವರು ಆ ದ್ರಾವಣವನ್ನು ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರನ್ನು ಮತ್ತು ಜಗದೀಶನನ್ನು ಎಲ್ಲರ ಸಮಕ್ಷಮ ವಶಕ್ಕೆ ಪಡೆದಿರುತ್ತಾರೆ. ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ, ಎದುರುದಾರರು

ಸಮಜಾಯಿಷಿಯಲ್ಲಿ "ಅವರ ಇಲಾಖೆಯಲ್ಲಿ ಪಾಲಿಹೌಸ್‌ಗೆ ಸಂಬಂಧಿಸಿದಂತೆ ದೂರುದಾರರು ದಿ: 20/12/2016ರಂದು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಮೇಲು ಸಹಿಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಸಲ್ಲಿಸಲಾಗಿದೆ, ಸಂಜೆ ಸುಂದರಯ್ಯ ಹಾಗೂ ಜಗದೀಶ್ ಕಚೇರಿಗೆ ಬಂದಿದ್ದ ಸಮಯದಲ್ಲಿ, ಸುಂದರಯ್ಯನವರಿಗೆ ಪಾಲಿಹೌಸ್‌ನಲ್ಲಿ ಬೇಸಾಯ ಮಾಡುವ ಕುರಿತು ಮಾಹಿತಿ ನೀಡಿರುತ್ತೇನೆ. ಇಲ್ಲಿ ನಡೆದಿರುವ ಘಟನೆಯಲ್ಲಿ ಬೇರೆ ಮಾಹಿತಿ ಇರುವುದಿಲ್ಲವೆಂದು" ಬರೆದುಕೊಟ್ಟಿರುತ್ತಾರೆ. ಶ್ರೀ.ಜಗದೀಶನು ಆತನ ಸಮಜಾಯಿಷಿಯಲ್ಲಿ "ಸುಂದರಯ್ಯ ಎಂಬುವವರ ಪಾಲಿಹೌಸನ್ನು ನಿರ್ಮಿಸಿದ್ದು, ಅವರು ಹಣವನ್ನು ಕೊಡಬೇಕಾಗಿತ್ತು, ನನಗೆ ತುಂಬಾ ಹಣದ ಅವಶ್ಯಕತೆ ಇದ್ದುದರಿಂದ, ನಾನು ತೋಟಗಾರಿಕೆ ಇಲಾಖೆಯಲ್ಲಿ ಹಣ ಮಂಜೂರು ಮಾಡಿಸಿಕೊಡಲು ಸುಂದರಯ್ಯರವರನ್ನು ಕೇಳಿಕೊಂಡಿದ್ದೆ, ನಾನು ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿದಾಗ, ಅವರು ನನಗೆ ಎಸ್.ಎ.ಡಿ.ಹೆಚ್.ಆಫೀಸಿಗೆ 3% ಹಾಗೂ ಡಿ.ಡಿ. ಆಫೀಸಿಗೆ 7% ಕಮೀಷನ್ ಕೇಳಿರುತ್ತಾರೆ. ಅದನ್ನು ನಾನು ಸುಂದರಯ್ಯ ಬಳಿಹೋಗಿ ಹೇಳಿಕೊಂಡಿರುತ್ತೇನೆ. ಇಂದು ಸಂಜೆ ನಾನು ಮೈಸೂರಿನಿಂದ ವಾಪಸ್ಸು ಬರಬೇಕಾದರೆ, ಎದುರುದಾರರ ಬಳಿ ಚರ್ಚೆ ಮಾಡಿಕೊಂಡು ಹೋಗಿದ್ದು, ಇಂದು ಸಂಜೆ ನಾನು ಮೈಸೂರಿನಿಂದ ಬರುವಾಗ ಸುಂದರಯ್ಯರವರು ಕರೆಮಾಡಿ ನಿಮಗೆ ಹಣಕೊಡುತ್ತೇನೆ ಅಂದರು, ಆ ಹಣವನ್ನು ನಾನು ಸ್ವೀಕರಿಸಿದೆ. ಇದರಲ್ಲಿ ನನ್ನದು ಯಾವುದೇ ಪಾತ್ರ ಇರುವುದಿಲ್ಲವೆಂದು" ಬರೆದುಕೊಟ್ಟಿರುತ್ತಾರೆ. ದೂರುದಾರರು ಮತ್ತು ನೆರಳುಸಾಕ್ಷಿ, ಎದುರುದಾರರು ನೀಡಿದ ಸಮಜಾಯಿಷಿಯನ್ನು ಅಲ್ಲಗಳೆದಿರುತ್ತಾರೆ. ಶ್ರೀ.ಜಗದೀಶನು ನೀಡಿದ ಸಮಜಾಯಿಷಿಯ ಕೆಲವು ಅಂಶಗಳನ್ನು ಒಪ್ಪಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರು ದೂರುದಾರರೊಂದಿಗೆ ಮಾತನಾಡಿದ ಸಂಭಾಷಣೆಯನ್ನು ಎದುರುದಾರರ ಸಹೋದ್ಯೋಗಿ ಶ್ರೀ. ಚಂದು ಪಿ.ಎಸ್. ಸಹಾಯಕ ತೋಟಗಾರಿಕೆ ಅಧಿಕಾರಿ, ಮಂಡ್ಯರವರಿಗೆ ಕೇಳಿಸಿದ್ದು, ಅವರು ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ. ನಂತರ, ಎಲ್ಲರ ಸಮಕ್ಷಮ ಎದುರುದಾರರನ್ನು ಮತ್ತು ಶ್ರೀ. ಜಗದೀಶನನ್ನು ದಸ್ತಗಿರಿಮಾಡಿ ಜಪ್ತಿ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಜಗದೀಶ್‌ರವರಿಂದ ತನಿಖಾಧಿಕಾರಿಯು ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಅಂಶವಿರುವುದು ಕಂಡುಬಂದಿರುತ್ತದೆ. ಅಲ್ಲದೆ, ಧ್ವನಿವಿಶ್ಲೇಷಣಾ ಪರೀಕ್ಷೆಯಲ್ಲಿ ಎದುರುದಾರರ ಧ್ವನಿಯು ಮಾದರಿ ಧ್ವನಿಯ ಸಿ.ಡಿ.ಯೊಂದಿಗೆ ತಾಳೆಯಾಗಿರುವುದು ಕಂಡುಬಂದಿರುತ್ತದೆ. ಆ ಕಾರಣ, ಎದುರುದಾರರು ನೀಡಿದ ಸಮಜಾಯಿಷಿಯು ತೃಪ್ತಿದಾಯಕವಾಗಿರುವುದಿಲ್ಲ. ತನಿಖಾಧಿಕಾರಿಯು ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳನ್ನು ಮತ್ತು ತಜ್ಞರ

ವರದಿಯನ್ನು ಹಾಗೂ ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ದಿ: 18/10/2021ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಎದುರುದಾರರು ಅವರ ಸಮಜಾಯಿಷಿಯ ಪ್ಯಾರಾ-12ರಲ್ಲಿ ದೂರುದಾರರ ಕಡತವು ದಿ: 20/12/2016ರಂದು ಡಿ.ಡಿ. ಆಫೀಸಿಗೆ ಬಂದಿದ್ದು, ಅದನ್ನು ಅದೇ ದಿನ ಪರಿಶೀಲಿಸಿ, ಜೆ.ಡಿ.ಎ. ಅವರ ಕಚೇರಿಗೆ ಕಳುಹಿಸಿರುವುದಾಗಿ ಮತ್ತು ದೂರುದಾರರು ಭೇಟಿ ಮಾಡುವ ಪ್ರಮೇಯವೇ ಒದಗುವುದಿಲ್ಲ ಹಾಗೂ ಯಾವುದೇ ಸಂಭಾಷಣೆಯನ್ನು ಮಾಡಿರುವುದಿಲ್ಲ. ನಮ್ಮ ಇಲಾಖೆಯಲ್ಲಿ ಮಧ್ಯಸ್ಥಗಾರರಿಂದ ಇಲ್ಲಸಲ್ಲದ ತೊಂದರೆಗಳು ಆಗುತ್ತಿರುವುದಾಗಿ, ಆ ಕಾರಣ, ನಮ್ಮ ಉಪನಿರ್ದೇಶಕರು ಮಧ್ಯಸ್ಥಗಾರರನ್ನು ತಡೆದುದರ ಪರಿಣಾಮ ದೂರುದಾರರು ಸುಳ್ಳು ಕಥೆ ಸೃಷ್ಟಿಸಿರುವುದಾಗಿ ತಿಳಿಸಿ, ಪ್ರಕರಣ ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಯು ಸಮರ್ಪಕವಾಗಿರುವುದಿಲ್ಲ. ಕಾರಣ, ಧ್ವನಿಪರೀಕ್ಷಾ ವರದಿಯಲ್ಲಿ ಎದುರುದಾರರ ಧ್ವನಿಯು ಮಾದರಿ ಧ್ವನಿಯೊಂದಿಗೆ ತಾಳೆಯಾಗಿರುವುದು ಮತ್ತು ಶ್ರೀ. ಜಗದೀಶ್‌ರವರಿಂದ ತನಿಖಾಧಿಕಾರಿಯವರು ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಅಂಶವಿರುವುದು ಕಂಡುಬಂದಿರುತ್ತದೆ. ಈ ಎಲ್ಲಾ ಕಾರಣಗಳಿಂದ ಮತ್ತು ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ

ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣಾ ಮಾಡಲು ಕರ್ನಾಟಕ ನಾಗರಿಕ ಸೇವಾ – (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 12(3) ರಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

12.1-22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.